**ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ(ಪೀಠಾಸೀನ ಹನೂರು)**

**ಸಿ.ಸಿ. 65/2025**

| | | |
|---|---|---|
| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿಃ** |
| ಹನೂರು  ಪೊಲೀಸ್ ಠಾಣೆ | | ನಾರಾಯಣ.ವಿ |

**::ಆಪಾದನೆ::**

**ಶ್ರೀಮತಿ. ಕಾವ್ಯಶ್ರೀ. ಎಂ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೊಳ್ಳೇಗಾಲ, ಆದ ನಾನು ನಿಮ್ಮ ಮೇಲೆ ಅಂದರೆಃ**

ನಾರಾಯಣ.ವಿ   ಬಿನ್ ಲೇಟ್ ವೆಂಕಟರಂಗಯ್ಯ, 37 ವರ್ಷ,
ಉದ್ಯೋಗಃ ಕೆಎ-10-ಎಫ್-0280 ಕೆ ಎಸ್ ಆರ್ ಟಿ ಸಿ ಚಾಲಕ
ವಾಸಃ ಸುವರ್ಣಾವತಿ ಬೀದಿ, ಮಾಂಬಳ್ಳಿ ಗ್ರಾಮ,
ಯಳಂದೂರು  ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

**ನಿಮ್ಮ ಮೇಲೆ ಇರುವ ಆಪಾದನೆ ಇಂತಿದೆಃ**

ದಿನಾಂಕಃ 21.11.2025 ರಂದು ಮಧ್ಯಾಹ್ನ 12.15 ಗಂಟೆ ಸಮಯದಲ್ಲಿ ಹನೂರು  ಪೊಲೀಸ್ ಠಾಣಾ ಸರಹದ್ದಿನ ಚೆನ್ನಾಲಿಂಗನಹಳ್ಳಿ ಗ್ರಾಮದ ಬಳಿ ಸಾಕ್ಷಿ-2 ರವರು ಎಳನೀರು ಕೊಯ್ಯುವ ಕೆಲಸಕ್ಕೆಂದು ಸಾಕ್ಷಿ-3, ಸಾಕ್ಷಿ-4 ಸಾಕ್ಷಿ-5 ರವರನ್ನು ತಮ್ಮ ಬಾಬ್ತು ಕೆಎ-40-7004 ಸಂಖ್ಯೆಯ ಟಾಟಾ ಏಸ್ ಗೂಡ್ಸ್ ವಾಹನದಲ್ಲಿ ಕರೆದುಕೊಂಡು ಚೆನ್ನಾಲಿಂಗನಹಳ್ಳಿ ಗ್ರಾಮದ ಕಡೆಯಿಂದ ದೊಡ್ಡಮಾಲಾಪುರ ಗ್ರಾಮದ ಕಡೆ ಹೋಗುತ್ತಿರುವಾಗ ಚೆನ್ನಾಲಿಂಗನಹಳ್ಳಿ ಗ್ರಾಮದ ಮುಂದೆ ದೊಡ್ಡಮಾಲಾಪುರಕ್ಕೆ ಹೋಗುವ ರಸ್ತೆಯ ಕ್ರಾಸ್ ಬಳಿ ಲೊಕ್ಕನಹಳ್ಳಿ  ಕಡೆಯಿಂದ ಕೊಳ್ಳೇಗಾಲದ ಕಡೆಗೆ  ಆರೋಪಿಯಾದ ನೀನು ಕೆಎ-10-ಎಫ್-0280 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರುಾಕತೆಯಿಂದ ಚಾಲನೆ ಮಾಡಿದ್ದು, ಆ ಮೂಲಕ  **ಬಿ. ಎನ್. ಎಸ್  281ರ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ  ಆರೋಪಿಯಾದ ನೀನು ಕೆಎ-10-ಎಫ್-0280 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರುಾಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಟಾಟಾ ಏಸ್ ವಾಹಕ್ಕೆ ಡಿಕ್ಕಿ ಹೊಡೆದು ಅಪಘುತವನ್ನುಂಟು ಮಾಡಿದ್ದು ಸದರಿ ಅಪಘಾತದಿಂದಾಗಿ ಸಾಕ್ಷಿ-5, ಸಾಕ್ಷಿ-2 ಮತ್ತು ಸಾಕ್ಷಿ-4 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು,  ಆ ಮೂಲಕ **ಬಿ.ಎನ್. ಎಸ್  125(ಎ)ರ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಕೆಎ-10-ಎಫ್-0280 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರುಾಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಟಾಟಾ ಏಸ್ ವಾಹಕ್ಕೆ ಡಿಕ್ಕಿ ಹೊಡೆದು ಅಪಘಾತವನ್ನುಂಟು ಮಾಡಿದ್ದು ಸದರಿ ಅಪಘಾತದಿಂದಾಗಿ ಸಾಕ್ಷಿ-2 ರಿಂದ ಸಾಕ್ಷಿ-4 ರವರಿಗೆ ತೀವ್ರ ಸ್ವರೂಪದ ಗಾಯ ಉಂಟಾಗಿದ್ದು, ಆ ಮೂಲಕ ಬಿ.ಎನ್. ಎಸ್ 125(ಬಿ)ರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ-1: ಮೇಲಿನ ಆಪಾದನೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಚಿಸುತ್ತೀರೋ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

29ನೇ ಸೆಪ್ಟೆಂಬರ್ ಮಾಹೆ 2025.

**(ಕಾವ್ಯಶ್ರೀ. ಎಂ)**
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಳ್ಳೇಗಾಲ.(ಪೀಠಾಸೀನ ಹನೂರು)